ಗಮನ ಸೆಳೆಯುವ ಸೂಚನೆ

ರಾಜ್ಯದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿನ ಶೌಚಾಲಯಗಳ ಅಸಮರ್ಪಕ ನಿರ್ವಹಣೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿನ ಶೌಚಾಲಯಗಳ ಅಸಮರ್ಪಕ ನಿರ್ವಾಹಣೆಯ (ಅಶುಚಿತ್ವದ) ವಿಶಯವನ್ನು ಕುರಿತು ನಾನು ಮಾನ್ಯ ಸಾರಿಗೆ ಮತ್ತು ವಕ್ಫ್ ಮಂತ್ರಿಯವರ ಗಮನ ಸೆಳೆಯುತ್ತೇನೆ

ಶ್ರೀ ಎಂ ವೀರಪ್ಪ ಮೊಯಿಲಿ: ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ ಮಾನ್ಯ ಸಾರಿಗೆ ಸಚಿವರ ಪರವಾಗಿ ನಾನು ಮಾನ್ಯ ಸದಸ್ಯೆಯವರಾದ ಶ್ರೀಮತಿ ಮೋಟಮ್ಮನವರು ಗಮನ ಸೆಳೆದಿರುವ ಬಗ್ಗೆ ಹೇಳಿಕೆಯನ್ನು ಮಾಡುತ್ತಿದ್ದೇನೆ.

The K.S.R.T.C. has entrusted the cleaning work of Bus stations to cleaning contractors. All major bus stations are covered by such cleaning contracts. In small bus stations cleaning work is being attended to by the sweepers appointed by the corporation. "All major Bus Stations have been by qenically maintained." Majority of the minor Bus stations are also kept clean and tidy. But at some places, due to scarcity of water, maintenance is not upto the mark. Efferts are being made to Augment water resources either by obtaining municipal water or by sinking bore wells.

Some contraint is involved in maintenance of clean toilets, due to use of toilets by the passengers and the local population.

At the other places the K.S.R.T.C is taking use of Bus stations belonging to town Muncipal Councile. At these bus stations the cleaning of toilets have not been attended to or maintained and inspite of several requests made by the K.S.R.T.C to the town municipal councils. The matter is again being taken up with such town municipal council. The matter is again being taken up with such town municipal councils to keep the toilet clean in such Bus stations. Slum clearance board has come forward in principle, to construct toilets in our Bus stands and hand them over to sulabh souchalays for maintenance.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಮಾನ್ಯ ಕೆಎಸ್ಆರ್‌ಟಿಸಿ ಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಾ ಮಾನ್ಯ ವಿದ್ಯಾ ಮಂತ್ರಿಗಳು ಅವರ ಹೇಳಿಕೆಯನ್ನು ಓದಿದ್ದಾರೆ. All major bus stations have been hygenioally maintained. ಎಂದು ಹೇಳಿದ್ದಾರೆ. ತಾವು ಸಹ ನೋಡಿರಬಹುದು, ನಿಜವಾಗಿ.....

ಅಧ್ಯಕ್ಷರು : ಅದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ.

ಶ್ರೀಮತಿ ಮೋಟಮ್ಮ : ಎಷ್ಟು ಹೇಸಿಗೆ ಆಗುತ್ತದೆ ಎಂದು ಹೇಳಿದರೆ, ಅದರ ಪಕ್ಕದಲ್ಲಿ ಬಸ್ ಸ್ಟ್ಯಾಂಡಿನಲ್ಲಿ ಒಂದು ಹೋಟೆಲ್ ಬೇರೆ ಇರುತ್ತದೆ. ಎಲ್ಲಿಂದಲೋ ಬಂದಂತಹ ಪ್ರಯಾಣಿಕರು ಅಲ್ಲಿ ಟಿಫನ್‌ಗೆ ಇಳಿಯುತ್ತಾರೆ. ಅದರ ಪಕ್ಕದಲ್ಲಿ ಕೊಳೆತು ನಾರುತ್ತಿರುವ ಟಾಯ್‌ಲೆಟ್ ಇರುತ್ತದೆ. ತಿಂಡಿ ತಿಂದರೆ ನಮ್ಮ ಪರಿಸ್ಥಿತಿ ಏನು

ಆಗಬೇಕು? ಅಲ್ಲಿ ಬರುವ ಜನರ ಪರಿಸ್ಥಿತಿ ಏನು ಆಗಬೇಕು? ಇದನ್ನು ಇವರು ಯೋಚನೆ ಮಾಡಿದ ಹಾಗೆ ಕಾಣಿಸುವುದಿಲ್ಲ. ಏಕೆಂದರೆ, ಸಾರಿಕೆ ಸಚಿವರು ಇದನ್ನೆಲ್ಲ ಒಂದು ಸಾರಿ ಇನ್ಸ್‌ಪೆಕ್ಷನ್ ಮಾಡಿಸಿದರೆ ಬಹಳ ಒಳ್ಳೆಯದು ಎನಿಸುತ್ತದೆ. hygenically maintained ಎಂದು ಉತ್ತರ ಹೇಳಿರುವುದರಿಂದ ಇನ್ಸ್‌ಪೆಕ್ಷನ್ ಮಾಡಿಸಿದರೆ ಒಳ್ಳೆಯದು. ನಾವು ಈಗ ಪ್ರಯಾಣ ಮಾಡಬೇಕಾದರೆ ನೋಡುತ್ತೇವೆ. ಹಾಸನ ಬಸ್ ಸ್ಟ್ಯಾಂಡಿನಲ್ಲಿ ಸುಲಭ ಸೌಚಾಲಯ ಎಂದು ಅಳವಡಿಸಿದ್ದಾರೆ. ಅದು ಲೀಕೇಜ್ ಆಗಿ ಬಸ್ ಸ್ಟ್ಯಾಂಡ್ ಒಳಗೆ ಹರಿಯುತ್ತಿದೆ.

ಅಲ್ಲಿ ಮೂಗು ಮುಚ್ಚಿಕೊಂಡು ಇರಬೇಕಾಗುತ್ತದೆ. ಅಷ್ಟೇ ಅಲ್ಲ, ಆ ಒಂದು ಪರಿಸರವನ್ನು ನೋಡುವುದಕ್ಕೂ ಆಗುವುದಿಲ್ಲ. ಸಣ್ಣ ಮತ್ತು ದೊಡ್ಡ ಬಸ್‌ಸ್ಟೇಶನ್‌ಗಳ ಎಲ್ಲ ಪರಿಸ್ಥಿತಿಯೂ ಹೀಗೆಯೇ ಇದೆ. ಚಿನ್ನರಾಯಪಟ್ಟಣ, ತುಮಕೂರು, ಚಿಕ್ಕಮಂಗಳೂರು, ಮುಂತಾದ ದೊಡ್ಡ ಬಸ್‌ಸ್ಟ್ಯಾಂಡ್‌ಗಳ ಪರಿಸ್ಥಿತಿಯೂ ಅದೇ ಇದೆ. ಇದನೆಲ್ಲಾ ನೋಡಿದರೆ ನಿಜವಾಗಿಯೂ ನಾವು ನಾಗರಿಕ ಸಮಾಜದಲ್ಲಿ ಇದ್ದೇವೋ ಎಂಬ ಬಗ್ಗೆ ಅನುಮಾನ ಬರುತ್ತದೆ. ನನಗೆ ಗೊತ್ತಿರುವ ಹಾಗೆ, ಬಸ್‌ಸ್ಟ್ಯಾಂಡ್ ಕ್ಲೀನಿಂಗ್ ಮಾಡುವುದಕ್ಕೆ ಖಾಸಗಿಯವರಿಗೆ ಕಂಟ್ರಾಕ್ಟ್ ಕೊಡುತ್ತಾರೆ. ಅದು ಯಾವ ರೀತಿ ಕೊಡುತ್ತಾರೆ ಮತ್ತು ಎಷ್ಟು ಹಣಕ್ಕೆ ಕೊಡುತ್ತಾರೆ. ಎಂಬುದು ಗೊತ್ತಿಲ್ಲ ಆದರೆ ಅಲ್ಲಿ ಸೂಕ್ತ ರೀತಿಯ ಸಿಬ್ಬಂದಿ ಮತ್ತು ಶುಚಿತ್ವದ ವ್ಯವಸ್ಥೆ ಇರುವುದಿಲ್ಲ. ಹೀಗೆ ಖಾಸಗಿಯವರಿಗೆ ಕಂಟ್ರಾಕ್ಟ್ ಕೊಡುವ ಬದಲು ಕೆ.ಎಸ್.ಆರ್.ಟಿ.ಸಿ ಯವರೇ ಅದನ್ನು ಏಕೆ ಮಾಡಬಾರದು? ಎಲ್ಲಾ ಕಡೆಗಳಲ್ಲಿಯೂ ಶುಚಿತ್ವ ಮತ್ತು ನೀರು ಹಾಗೂ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು, ಟಾಯ್‌ಲೆಟ್‌ನ ಒಳ್ಳೆಯ ವ್ಯವಸ್ಥೆ ಇರಬೇಕು, ಸಾರ್ವಜನಿಕರು ಹೆಚ್ಚಾಗಿ ಬರುವ ಸ್ಥಳಗಳಲ್ಲಿ ಈ ರೀತಿಯಲ್ಲಿ ಕೊಳಕು ಶೌಚವ್ಯವಸ್ಥೆ ಇದ್ದರೆ ಅದರ ಮೂಲಕ ರೋಗರುಜಿನಗಳು ಹರಡುವುದಕ್ಕೆ ಸಾಧ್ಯತೆ ಇರುತ್ತದೆ. ಈ ಬೇಸಿಗೆಯ ಕಾಲ ರೋಗಗಳು ಹಬ್ಬತಕ್ಕಂಥ ಕಾಲ. ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳು ಹಬ್ಬುವುದೇ ಇಂಥ ಸ್ಥಳಗಳ ಮೂಲಕ. ಆದುದರಿಂದ ಇದನ್ನು ತಡೆಗಟ್ಟಲು ಮುಖ್ಯವಾಗಿ ಈ ಶೌಚಾಲಯಗಳನ್ನು ಶುಚಿಯಾಗಿ ಇಡಬೇಕು. ಹಾಗೆಯೇ ಅಲ್ಲಿಯ ಹೋಟೆಲ್‌ಗಳವರು ಕೂಡ ಈ ಬಗ್ಗೆ ಶುಚಿತ್ವದ ಕಡೆಗೆ ಗಮನಕೊಡಬೇಕು. ಇನ್ನು ವಿದೇಶಗಳಲ್ಲಿ ಪೇಯಿಂಗ್ ಸಿಸ್ಟಂ ಇರುತ್ತದೆ ಎಂದು ಕೇಳಿದ್ದೇನೆ. ಅದನ್ನು ಇಲ್ಲಿ ಕೂಡ ಇಂಟರ್‌ಡ್ಯೂಸ್ ಮಾಡಬಹುದು. ಆ ಪ್ರಕಾರ ಯಾರು ಈ ಒಂದು ಶೌಚಾಲಯಗಳ ಜವಾಬ್ದಾರಿಯನ್ನು ಪಡೆದಿರುತ್ತಾರೆ ಅವರು ಅದನ್ನು ಸುವ್ಯಸ್ಥಿತವಾಗಿ ಇಟ್ಟು, ಶೌಚಾಲಯವನ್ನು ಉಪಯೋಗಿಸಿದವರಿಂದ ಒಂದು ಶುಲ್ಕ ರೂಪದಲ್ಲಿ ಹಣವನ್ನು ವಸೂಲು ಮಾಡುತ್ತಾರೆ.

(ಶ್ರೀ ರಮಾನಾಥ ರೈಯವರು ಬೇರೆಯವರ ಸ್ಥಾನದಲ್ಲಿ ನಿಂತಿದ್ದರು)

MR. SPEAKER : Mr. Rai, are you trying to catch my eye?

ಶ್ರೀಮತಿ ಮೋಟಮ್ಮ : ದಯಮಾಡಿ ನನ್ನ ಸಲಹೆಗಳನ್ನು ಸರಕಾರದವರು ಗಮನಿಸಿ, ಶೌಚಾಲಯಗಳ ವ್ಯವಸ್ಥೆಯ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್ : ಮಾನ್ಯ ಅಧ್ಯಕ್ಷರೆ, ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲೂ ಬಸ್‌ಸ್ಟ್ಯಾಂಡ್‌ಗಳು ಇವೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಕೂಡ ಇದ್ದಾರೆ. ಅದೇ ರೀತಿಯಲ್ಲಿ ಪ್ರಯಾಣಿಕರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಇದೆ. ಅದರಲ್ಲಿಯೂ ಶಾಲಾ ಕಾಲೇಜುಗಳಿಗೆ ಹೋಗತಕ್ಕಂಥವರು, ಪರಊರುಗಳಿಗೆ ಪ್ರಯಾಣಿಸತಕ್ಕಂಥವರು, ಮುಂತಾಗಿ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಪ್ರಯಾಣದ ದೂರ ಹೆಚ್ಚಿದಂತೆಲ್ಲಾ ಅಲ್ಲಲ್ಲಿ ಇಳಿಯುವ ಸಂದರ್ಭಗಳಲ್ಲಿ

ಶೌಚಾಲಯಗಳನ್ನು ಉಪಯೋಗ ಮಾಡಬೇಕಾಗುತ್ತದೆ. ಅದುದರಿಂದ ಶೌಚಾಲಯಗಳನ್ನು ಎಲ್ಲಾ ಕಡೆಗಳಲ್ಲಿಯೂ ಕಡ್ಡಾಯವಾಗಿ ನಿರ್ಮಾಣ ಮಾಡಬೇಕು, ಕೆಲವು ಕಡೆಗಳಲ್ಲಿ ಈಗಾಗಲೇ ಇದ್ದರೂ ಕೂಡ ಅವುಗಳು ಶುಚಿತ್ವವನ್ನು ಹೊಂದಿರುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಅಂಥ ಯಾವುದೇ ವ್ಯವಸ್ಥೆಯೇ ಇರುವುದಿಲ್ಲ, ಆದುದರಿಂದ ಸಾರಿಗೆ ಸಂಸ್ಥೆಯವರು ಈ ಬಗ್ಗೆ ಆದ್ಯಗಮನ ಕೊಟ್ಟು ಎಲ್ಲಾ ಕಡೆಗಳಲ್ಲಿ ಶೌಚಾಲಯದ ವ್ಯವಸ್ಥೆ ಮತ್ತು ಅದರ ಸೂಕ್ತ ನಿರ್ವಹಣೆಯ ಬಗ್ಗೆ ಗಮನ ಕೊಡಲೇಬೇಕು. ಕೆ.ಎಸ್.ಆರ್.ಟಿ.ಸಿ ಯವರು ಕೆಲವು ಕಡೆಗಳಲ್ಲಿ ಶೌಚಾಲಯಗಳನ್ನು ಕಟ್ಟಿದ್ದಾರೆ. ಅಲ್ಲಿ ನೀರಿನ ವ್ಯವಸ್ಥೆಯಿಲ್ಲ. ನೀರಿನ ವ್ಯವಸ್ಥೆಯಿದ್ದರೆ ಮೈಂಟೇನ್ ಮಾಡುವುದಕ್ಕೆ ಸ್ವೀಪರ್ಸ್ ವ್ಯವಸ್ಥೆಯಿಲ್ಲ. ಈ ವ್ಯವಸ್ಥೆಯನ್ನು ಮುನ್ಸಿಪಾಲಿಟಿಯವರು ಮಾಡಲಿ ಎಂದು ಕೆ.ಎಸ್.ಆರ್.ಟಿ.ಸಿ ಯವರು ಬಿಟ್ಟು ಬಿಡುತ್ತಾರೆ. ಅವರೂ ಮಾಡುವುದಿಲ್ಲ, ಇವರೂ ಮಾಡುವುದಿಲ್ಲ, ಹೀಗಾಗಿ ತೊಂದರೆ ಸಾರ್ವಜನಿಕರಿಗೆ ಉಂಟಾಗುತ್ತದೆ. ಈ ಗೊಂದಲವನ್ನು ತಪ್ಪಿಸಿ ಸೂಕ್ತ ಶುಚಿತ್ವದ ವ್ಯವಸ್ಥೆಯನ್ನು ಮಾಡಬೇಕು. ರೈಲ್ವೆ ಸ್ಟೇಶನ್‌ಗಳಲ್ಲಿ ಹೇಗೆ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಸೂಕ್ತ ರೀತಿಯಲ್ಲಿ ವ್ಯವಸ್ಥಿತವಾಗಿ ಇರುತ್ತದೋ ಅದೇ ರೀತಿಯಲ್ಲಿ ನಮ್ಮ ಬಸ್‌ಸ್ಟೇಶನ್‌ಗಳಲ್ಲಿಯೂ ಇಟ್ಟು ಸಿಬ್ಬಂದಿವರ್ಗವನ್ನು ನೇಮಿಸಿ ಸೂಕ್ತ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಶಾಸಕಿಯವರು ಶೌಚಾಲಯಗಳ ಬಗ್ಗೆ ಸೂಕ್ತ ಸಲಹೆಗಳನ್ನು ಮತ್ತು ಪ್ರಸಕ್ತ ಇರುವ ತೊಂದರೆಗಳನ್ನು ನಿವೇದಿಸಿಕೊಂಡಿದ್ದಾರೆ. ಅವರು ಹೇಳಿರುವ ಪ್ರಕಾರ ಈಗ ಇರುವ ವ್ಯವಸ್ಥೆಯು ಯಾರೂ ಒಪ್ಪಿಕೊಳ್ಳತಕ್ಕಂಥಾದ್ದು ಅಲ್ಲ. ಆದುದರಿಂದ ಸದಸ್ಯರೆಯವರು ಸಲಹೆಗಳನ್ನು ಕುರಿತು ಸರಕಾರ ಯೋಚನೆ ಮಾಡುತ್ತದೆ. ದೊಡ್ಡ ದೊಡ್ಡ ಬಸ್‌ಸ್ಟ್ಯಾಂಡ್‌ಗಳಲ್ಲಿ ಕಂಟ್ರಾಕ್ಟ್ ಆಧಾರದ ಮೇಲೆ ಕೆಲವು ವ್ಯವಸ್ಥೆ ಇರಬಹುದು. ಶೌಚಾಲಯಗಳ ದುರ್ವಾಸನೆಯು ಎಲ್ಲರಿಗೂ ತಿಳಿದೇ ಇದೆ. ಒಂದು ವೇಳೆ ಸರಕಾರಕ್ಕೆ ಮೂಗು ಇಲ್ಲ ಎಂದು ತಾವುಗಳು ಭಾವಿಸಿದರು. ನಮಗಂತೂ ಮೂಗು ಇದ್ದೇ ಇದೆ. ಆದುದರಿಂದ ಈ ಕುರಿತು ಏನು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಮಾಡೋಣ. ಆದ್ದರಿಂದ ಇದರ ಬಗ್ಗೆ ಪುನರ್ವಿಮರ್ಶಿಸಿ ಏನು ಪರ್ಯಾಯ ವ್ಯವಸ್ಥೆ ಮಾಡಬೇಕಾಗಿದೆಯೋ ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನೊಂದು ನಿಲುವಳಿ ಸೂಚನೆ ಕಳಿಸಿದ್ದೆ.

MR. SPEAKER : Immediately after the question hour you should have drawn my attention.

SRI. D.B. CHANDRA GOWDA : I drew....

ಶ್ರೀ ಹೆಚ್. ಏಕಾಂತಯ್ಯ : ತಾವೇ ಪ್ರಸ್ತಾಪಿಸಬಹುದೆಂಬ ಯೋಚನೆಯಲ್ಲಿದ್ದೆವು.

MR. SPEAKER : You raised so many other issues that your adjournment motion has been relegated. look into the rules. Immediately after the question hour .....

SRI D.B. CHANDRE GOWDA : I did raise but unfortunately the Hon.Member Sri Byregowda's eclectrical power was so strong that I get electrocuted. Therefore I could not raise it.

MR.SPEAKER : I would draw your attention to rule 311.

ನಿಯಮ 311ರ ಪ್ರಕಾರ ನೋಟೀಸ್ ಕೊಡಿ ಅದನ್ನು ಅವರಿಗೆ ಕಳಿಸಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇವತ್ತು ಕೆ.ಎಸ್.ಆರ್.ಟಿ.ಸಿ.ಯವರು ಸಹ ಮಂತ್ರಿಗಳ ರಾಜೀನಾಮೆ ಕೇಳಿದ್ದಾರೆ.

ಅಧ್ಯಕ್ಷರು: ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಯಾರ ರಾಜೀನಾಮೆಯಾದರೂ ಯಾವ ಕ್ಷಣದಲ್ಲಿ ಬೇಕಾದರೂ ಅದಕ್ಕೆ ಅಡ್ಡಿ ಮಾಡಲು ಯಾರಿಗೂ ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಅಡ್ಡಿ ಮಾಡಬೇಕೆಂದಲ್ಲ. ಈಗ ಮಂತ್ರಿಗಳೂ ಸದನದಲ್ಲಿದ್ದಾರೆ ನಾವೂ ಇದ್ದೇವೆ. ಆದರೆ ಹೊರಗಡೆಯವರಲ್ಲ ರಾಜಿನಾಮೆ ಕೊಡಿ ಎಂದು ಏಕೆ ಕೇಳುತ್ತಿದ್ದಾರೆ. ತಿಳಿದುಕೊಳ್ಳೋಣ ಎಂದು ತಮ್ಮ ಮೂಲಕ ಅವರಗಮನ ಸೆಳೆದೆ ಅಷ್ಟು ಚೀಪಾಗಿ ಹೊರಗಡೆಯವರು ಕೇಳುವುದು ಬೇಡ. ಯಾವ ಹಂತದಲ್ಲಿ ರಾಜೀನಾಮೆ ಕೇಳಬೇಕೆಂದು ನಾವು ನಿರ್ಧಾರ ಮಾಡೋಣ ಯಾರ್ಯಾರೊ ಕೇಳುತ್ತಿದ್ದಾರೆ. ಅದು ಬೇಡ.

ಶ್ರಿ ಪಿ.ಜಿ.ಆರ್. ಸಿಂಧ್ಯ: ನನ್ನದೊಂದು ಪ್ರಾರ್ಥನೆ ದಯವಿಟ್ಟು ಲೆಜಿಸ್ಲೇಟರ್ಸ್ ಡೇ ಯನ್ನು ಇನ್‌ಡೆಫ್‌ನೆಟ್ಟಾಗಿ ಪೋಸ್ಟ್‌ಪೋನ್ ಮಾಡಿದ್ದೀರಿ ತಾವು ಈ ಮನೆಯ ಎಲ್ಲಾ ಸದಸ್ಯರ ಒಂದು ಗ್ರೂಪ್ ಫೋಟೊ ತೆಗೆಸಿಕೊಡಬೇಕು

(ಗೊಂದಲ)

ಅಧ್ಯಕ್ಷರು: ಈ ಪ್ರಶ್ನೆಗೆ ಮಾನ್ಯ ಬಸವಲಿಂಗಪ್ಪನವರು ಉತ್ತರಿಸುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಅಧ್ಯಕ್ಷರೇ ಇವತ್ತು ಬೆಳಿಗಿನಿಂದ ಇವರನ್ನೆಲ್ಲ ನೋಡುತ್ತಾ ಕುಳಿತ್ತಿದ್ದೇನೆ. ಅವರ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ, ಮುಖದ ಮೇಲೆ ಮಾತ್ರ ಬೇರೆ ಬೇರೆ ಚಿತ್ರಗಳು ಕಾಣುತ್ತಿದೆ. ನಿನ್ನೆ ತಾನೇ ಪಾರ್ಲಿಮೆಂಟನ್ನು ವಿಸರ್ಜನೆ ಮಾಡಿದ್ದಾರೆ. ಚುನಾವಣೆಗೆ ಹೋಗುತ್ತಿದ್ದೇವೆ. ನೀವು ಯಾವ ಸ್ಥಾನದಲ್ಲಿ ನಿಂತುಕೊಂಡು ಚುನಾವಣೆ ಎದುರಿಸುತ್ತೀರೆಂದು ನನ್ನೆಯಿಂದ ಯೋಚನೆ ಮಾಡುತ್ತಿದ್ದೇನೆ. ನನಗೆ ಅರಿವಾಗಲಿಲ್ಲ. ಅಧ್ಯಕ್ಷರೇ ಫೋಟೋ ಅನಾವಶ್ಯಕ ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅಧ್ಯಕ್ಷರೇ ನಾನು ನಿಮ್ಮನ್ನು ಕೇಳಿದ್ದುದು ಸರ್ಕಾರವನ್ನಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಏಕೆಂದರೆ ಅವರು ಇರುವ ಚಿಂತಾಜನಕ ಸ್ಥಿತಿಯಲ್ಲಿ ಫೋಟೋ ಚೆನ್ನಾಗಿ ಬರುವುದಿಲ್ಲ ಮುಂದಕ್ಕೆ ಹಾಕಿ.

ಶ್ರೀ ಎಂ. ವೀರಪ್ಪ ನೊಯಿಲಿ: ಲೋಕಸಭೆ ಚುನಾವಣೆ ಅನೌನ್ಸ್ ಮಾಡಿದ್ದಾರೆ ಅದರಿಂದ ನಿಮಗೆ ಭಯವೇ? ಎಲೆಕ್ಷನ್ ಆದ ನಂತರ ನಿಮ್ಮ ಮುಖದ ರೂಪಾಂತರವಾಗುತ್ತದೆಂದುಕೊಂಡು ಈಗಲೇ ಫೋಟೋ ಕೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ನಮಗೆ ಭಯವಿಲ್ಲ. ವಿರೋದ ಪಕ್ಷಗಳು ರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಈ ಸರ್ಕಾರದ ಕೋನೇ ಘಳಿಗೆಯಲ್ಲಿ ಹೋದೀತಲ್ಲ ಅದಕ್ಕೆ ಫೋಟೋ ರೆಡಿಯಾಗಿಬಿಡಲಿ ಎಂದು ಕೇಳಿದ್ದು ಅದು ಯಾರನ್ನೂ ಶಾಸ್ತ್ರ ಕೇಳಿಕೊಂಡು ಕುಳಿತುಕೊಳ್ಳುವುದಿಲ್ಲ ಹೇಳದೆ ಕೇಳದೆ ಈ ಸಭೆ ಸೇರುವುದಕ್ಕೆ ಮುಂದೆಯೇ ಹೋಗುತ್ತದೆ. ತಮ್ಮ ಬಗ್ಗೆ ಗೌರವ ಇಟ್ಟುಕೊಂಡು ಈ ಮಾತು ಹೇಳುತ್ತಿದ್ದೇನೆ. ತಾವು ತಪ್ಪು ತಿಳಿದುಕೊಳ್ಳಬಾರದು. ನಿಮ್ಮ ಫೋಟೋ ನಮ್ಮ ಜೊತೆ ಇರಬೇಕೆಂದು ಗೌರವದಿಂದ ಕೇಳುತ್ತಿದ್ದೇನೆ. ತಾವೇನಾದರೂ ರಾಷ್ಟ್ರದ ರಾಜಕಾರಣಕ್ಕೆ ದಯಮಾಡಿಸಿದರೆ.....

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ವಾಟಾಳ್ ನಾಗರಾಜ್‌ರವರು ಒಳ್ಳೆಯತನವನ್ನು ಅಪೇಕ್ಷಿಪಡುವುದಿಲ್ಲ. ಬಹಳ ಮಾತನಾಡುತ್ತಾರೆ. ಅವರ ಮಾತನ್ನು ಬೆಳಿಗ್ಗೆಯಿಂದ

ಕೇಳುತ್ತಿದ್ದೇನೆ. ಏನಾದರೂ ಆಗಿ ಅವರ ಜೊತೆಯಲ್ಲಿ ಇನ್ನೊಬ್ಬರನ್ನು ವಿಧಾನಸೌಧಕ್ಕೆ ಕರೆದುಕೊಂಡು ಬಂದರೆ ನಮಗಂತೂ ಬಹಳ ಸಂತೋಷ.

ಶ್ರೀ ವಾಟಾಳ್ ನಾಗರಾಜ್: ನಾನೊಬ್ಬನೇ ಸಾಕು 25 ಜನ ಇದ್ದಾಹಾಗೆ ಇನ್ನೊಬ್ಬರನ್ನು ಏತಕ್ಕೆ ಕರೆದುಕೊಂಡು ಬರಬೇಕು.

ಶ್ರೀ ಬಿ.ಎಂ. ಇದಿನಬ್ಬ: ವಾಟಾಳ್ ನಾಗರಾಜ್‌ರವರು ಬರೀ ಫೋಟೋ ಮಾತ್ರ ಅಪೇಕ್ಷೆ ಮಾಡುತ್ತೀರಿ. ಜೀವಂತ ಜನರ ಜೀವಂತಿಕೆಯನ್ನು ನೀವು ಮೆಚ್ಚಬೇಕು. ಫೋಟೋ ಏತಕ್ಕೆ ಬೇಕು?

ಶ್ರೀ ಎಂ. ವಿ. ವೆಂಕಟಪ್ಪ: ಇದೆಲ್ಲಕಿಂತ ಬದಲಾಗಿ " who is who" ಮಾಡಿದರೆ ಎಲ್ಲರ ಫೋಟೋಗಳನ್ನು ಅದರಲ್ಲಿ ನೋಡಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್: ನಿಮಗೆ ನಾವು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಈ ಸಭೆಯಲ್ಲಿ ತಾವು ಇರಬೇಕು. ತಾವು ನಮ್ಮ ಅಧ್ಯಕ್ಷರಾಗಿ ಇರಬೇಕೆಂಬುದು ನಮಗೆಲ್ಲರಿಗೂ ಆಸೆ ಅಭಿಮಾನ ಇದೆ. ತಾವು ದೆಹಲಿಗೆ ಹೋಗುತ್ತೀರಿ ಎನ್ನತಕ್ಕಂಥ ಭಾವನೆ ನನಗೆ ಬಂದಿಲ್ಲ. ನಾನಂತೂ ಅತ್ಯಂತ ಪ್ರೀತಿ ವಿಶ್ವಾಸದಿಂದ ಸದನದಲ್ಲಿ ತಾವು ಅಧ್ಯಕ್ಷರಾಗಿ ಇರಬೇಕು ಇನ್ನು ಉನ್ನತವಾದ ಸ್ಥಾನಕ್ಕೆ ಹೋಗಬೇಕು ಎಂದು ಬಯಸಕ್ಕಂತಹವನು. ಅದನ್ನು ನಾವು ಅಪೇಕ್ಷೆ ಮಾಡುತ್ತೇವೆ.

ಅಧ್ಯಕ್ಷರು: ಈಗ ಸಭೆಯು ಮುಂದುವರಿದು ಮತ್ತೆ 2-20ಕ್ಕೆ ಸಮಾವೇಶ ಗೊಳ್ಳುತ್ತದೆ.

(ಸದನವು 1-17ಗಂಟೆಗೆ ಮುಕ್ತಾಯಗೊಂಡು ಪುನಃ 2-20ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

ಸದನವು 2 ಗಂಟೆ 30 ನಿಮಿಷಕ್ಕೆ ಪುನಃ ಸೇರಿತು

(ಉಪಾಧ್ಯಕ್ಷರಾದ ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ನಿಯಮ 334ರ ಮೇರೆಗೆ

1) ಇಂಡಿ ತಾಲ್ಲೂಕಿನ ನಿಂಬಾಳ ಗ್ರಾಮದ ಕೆರೆಗೆ ಅನುದಾನ ಬಿಡುಗಡೆ.

ಶ್ರೀ ಮನೋಹರ್ ಐನಾಪುರ (ಬಳ್ಳೋಳಿ) : ಬೆಳ್ಳಿಗೆ ಮಾನ್ಯ ಉಪಾಧ್ಯಕ್ಷಿಣಿಯವರೇ ಇಂಡಿ ತಾಲ್ಲೂಕಿನ ನಿಂಬಾಳ ಗ್ರಾಮದ ಕೆರೆಗೆ ಮೂರನೇ ಒಂದರಷ್ಟು ಅನುದಾನವನ್ನು ಬಿಡುಗಡೆ ಮಾಡಲು 1990-91ರ ಆಧಿವೇಶನದಲ್ಲಿ ಪ್ರಸ್ತಾಪ ಮಾಡಲಾಗಿ, ಅನುಧಾನ ಬಿಡುಗಡೆ ಮಾಡಲಾಗುವುದೆಂದು ಆಗಿನ ಮಾನ್ಯ ಲೋಕೋಪಯೋಗಿ ಸಚಿವರು ಭರವಸೆ ನೀಡಿದ್ದರು. ಆದರೆ ಈವರೆಗೆ ಏನೂ ತಿಳಿಯಲಿಲ್ಲ. ಈಗಲಾದರೂ ಈ ವರ್ಷದ ಆಯವ್ಯಯದಲ್ಲಿ ಮೂರನೆ ಒಂದರಷ್ಟು ಹಣ ಬಿಡುಗಡೆ ಮಾಡಲಾಗಿದ್ದೆಯೇ? ಮಾಡಿರದಿದ್ದರೆ ಈ ತಿಂಗಳಲ್ಲೇ ಹಣ ಬಿಡುಗಡೆ ಮಾಡಲಿಕ್ಕೆ ಯಾವ ಕ್ರಮವನ್ನು ಮಾನ್ಯ ಸಚಿವರು ತೆಗೆದುಕೊಳ್ಳುವರು ಎಂಬುದನ್ನು ತಿಳಿಸುವರೇ?

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣಾ ಹಾಗೂ ವ್ಯವಾರಗಳ ಸಚಿವರು): ಮಾನ್ಯ ಶಾಸಕರು ಎತ್ತಿದಂಥ ಪ್ರಶ್ನೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.